## 1. ಪರಿಚಯ

ಈ ನ್ಯಾಯಸಮ್ಮತ ಅಭ್ಯಾಸ ಸಂಹಿತೆ ("ಸಂಹಿತೆ") ಅನ್ನು Whizdm Finance Private Limited ("ಕಂಪನಿ") ಅವರು ಭಾರತೀಯ ರಿಸರ್ವ್ ಬ್ಯಾಂಕ್ (RBI) ಬಿಡುಗಡೆ ಮಾಡಿದ ಮಾಸ್ಟರ್ ನಿರ್ದೇಶನ – ನಾನ್-ಬ್ಯಾಂಕಿಂಗ್ ಫೈನಾನ್ಶಿಯಲ್ ಕಂಪನಿಗಳು – ಮಾಪಕ ಆಧಾರಿತ ನಿಯಂತ್ರಣ, 2023 ರ ಅಧ್ಯಾಯ VII ಫೇರ್ ಪ್ರಾಕ್ಟೀಸಸ್ ಕೋಡ್ ಮತ್ತು RBI ಕಾಲಕಾಲಕ್ಕೆ ಬಿಡುಗಡೆ ಮಾಡುವ ಇತರ ಸಂಬಂಧಿತ ಮಾರ್ಗಸೂಚಿಗಳನ್ನು ಅನುಸರಿಸಿ ರೂಪಿಸಲಾಗಿದೆ. RBI ಸೂಚಿಸುವ ಮಾನದಂಡಗಳಿಗೆ ಅನುಗುಣವಾಗಿ ಕಂಪನಿ ಈ ಸಂಹಿತೆಗೆ ಅಗತ್ಯಬಂದಾಗ ತಿದ್ದುಪಡಿ ಮಾಡುತ್ತದೆ.

## 2. ಧ್ಯೇಯೋದ್ದೇಶಗಳು

2.1. ಗ್ರಾಹಕರೊಂದಿಗಿನ ವ್ಯವಹಾರದ ವಿಚಾರದಲ್ಲಿ ಸಕಾರಣಾತ್ಮಕ ಪ್ರಮಾಣಗಳನ್ನು ನಿಗದಿಗೊಳಿಸುವುದರ ಮೂಲಕ ವ್ಯವಹಾರಕ್ಕೆ ಸಂಬಂಧಿಸಿದಂತೆ ಉತ್ತಮ, ನ್ಯಾಯೋಚಿತ, ಮತ್ತು ಪಾರದರ್ಶಕ ಪದ್ಧತಿಗಳನ್ನು ಅನುಸರಿಸುವುದು;

2.2. ಕಾರ್ಯನಿರ್ವಹಣೆಯ ಉನ್ನತ ಪ್ರಮಾಣಗಳನ್ನು ಸಾಧಿಸಲು ನ್ಯಾಯೋಚಿತ ಸ್ಪರ್ಧೆಯ ಮೂಲಕ ಮಾರುಕಟ್ಟೆಯ ಶಕ್ತಿಗಳನ್ನು ಉತ್ತೇಜಿಸುವುದು;

2.3. ಒಂದು ನ್ಯಾಯೋಚಿತವಾದ ಮತ್ತು ಸೌಹಾರ್ದಯುತವಾದ ಬಾಂಧವ್ಯವನ್ನು ಪ್ರೋತ್ಸಾಹಿಸುವ ದಿಶೆಯಲ್ಲಿ ಗ್ರಾಹಕರೊಂದಿಗೆ ಸಂಬಂಧವನ್ನು ಇರಿಸಿಕೊಳ್ಳುವುದು;

2.4. ಅಗತ್ಯವಿದ್ದೆಡೆಯಲ್ಲಿ, ಕಾನೂನಿನ ಪ್ರಕ್ರಿಯೆಯನ್ನು ಯಥಾವತ್ತಾಗಿ ಅನುಸರಿಸುತ್ತಾ, ವಸೂಲಾತಿಯನ್ನು ಮತ್ತು ಅನುಷ್ಠಾನವನ್ನು ನಿರ್ವಹಿಸುವುದು.

## 3. ಅನ್ವಯಿಸುವಿಕೆ

3.1. ಕಂಪನಿಯ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ಒದಗಿಸುವ ಎಲ್ಲ ವ್ಯಕ್ತಿಗಳಿಗೆ ಅಥವಾ ಓರ್ವ ಉದ್ಯೋಗಿಯ ರೂಪದಲ್ಲಿ ಅಥವಾ ಇಲ್ಲವಾದಲ್ಲಿ ಯಾವುದೇ ರೀತಿಯಲ್ಲಿ ಮತ್ತು/ಅಥವಾ ಯಾವುದೇ ವಿಧಾನದ ಮೂಲಕ ಗ್ರಾಹಕರೊಂದಿಗೆ ವರ್ತಿಸುವವರಿಗೆ ಅನ್ವಯವಾಗುವಂತಹದ್ದು.

3.2. ಅನಿರೀಕ್ಷಿತವಾದಂತಹ ಯಾವುದೇ ಕೈಮೀರಿದ, ಪ್ರತಿಕೂಲ ಸನ್ನಿವೇಶಗಳನ್ನು ಹೊರತುಪಡಿಸಿ, ಒಂದು ಸಾಮಾನ್ಯ ಕಾರ್ಯನಿರ್ವಹಣಾ ಪರಿಸ್ಥಿತಿಯಡಿಯಲ್ಲಿ ಸಂಹಿತೆಯು ಅನ್ವಯವಾಗುತ್ತದೆ.

3.3. ಸಂಹಿತೆಯು ಸಮಗ್ರತೆಯ ಮತ್ತು ಪಾರದರ್ಶಕತೆಯ ನೈತಿಕ ತತ್ವಗಳನ್ನು ಆಧರಿಸಿದೆ ಮತ್ತು ಎಲ್ಲ ಕ್ರಮಗಳು/ಕ್ರಿಯೆಗಳು ಮತ್ತು ವ್ಯವಹಾರಗಳು ಸಂಹಿತೆಯಿಂದ ಸ್ಫೂರ್ತಿಯನ್ನು ಪಡೆದುಕೊಂಡಂತಹವುಗಳಾಗಿರುತ್ತವೆ.

## 4. ಬದ್ಧತೆ

4.1. ಕಂಪನಿಯು ಎಲ್ಲ ಕಾಲಗಳಲ್ಲಿಯೂ ನ್ಯಾಯೋಚಿತವಾಗಿ, ಸಕಾರಣಾತ್ಮಕವಾಗಿ ವರ್ತಿಸುವ ದಿಶೆಯಲ್ಲಿ ಹಾಗೂ ಉದ್ಯಮ ವಲಯದಲ್ಲಿ ಪ್ರಚಲಿತದಲ್ಲಿರುವ ಪ್ರಮಾಣಿತ ಪದ್ಧತಿಗಳನ್ನು ಅನುಸರಿಸುವ ದಿಶೆಯಲ್ಲಿ ತನ್ನಿಂದ ಸಾಧ್ಯವಾದಷ್ಟು ಪ್ರಯತ್ನಿಸುತ್ತದೆ.

4.2. ಕಂಪನಿಯು ಎಲ್ಲ ಸಂಬಂಧಿತ ಕಾಯಿದೆಗಳನ್ನು, ಕಾನೂನುಗಳನ್ನು ಅನುಸರಿಸುತ್ತದೆ ಮತ್ತು ಗ್ರಾಹಕರೊಂದಿಗೆ ವರ್ತಿಸುವಾಗ ಸಮಗ್ರತೆಯ ಮತ್ತು ಪಾರದರ್ಶಕತೆಯ ನೈತಿಕ ತತ್ವಗಳನ್ನು ಪೂರೈಸುತ್ತದೆ.

4.3. ಗ್ರಾಹಕರೊಂದಿಗೆ ವರ್ತಿಸುವಾಗ ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಸ್ಪಷ್ಟ ಮಾಹಿತಿಯನ್ನು ಆಂಗ್ಲ ಅಥವಾ ಹಿಂದಿ ಅಥವಾ ಸೂಕ್ತವಾದ ಸ್ಥಳೀಯ ಭಾಷೆಯಲ್ಲಿ ಒದಗಿಸುವ ದಿಶೆಯಲ್ಲಿ, ಕಂಪನಿಯು ಅಗತ್ಯವಿರಬಹುದಾದ ಎಲ್ಲ ಕ್ರಮಗಳನ್ನೂ ಕೈಗೊಳ್ಳುತ್ತದೆ:

i. ಅದರ ವಿವಿಧ ಉತ್ಪನ್ನಗಳು ಮತ್ತು ಸೇವೆಗಳು;

ii. ಷರತ್ತುಗಳು ಮತ್ತು ನಿಬಂಧನೆಗಳು, ಬಡ್ಡಿಯ ದರಗಳು/ಸೇವಾ ಶುಲ್ಕಗಳು;

iii. ಗ್ರಾಹಕರಿಗೆ ಲಭ್ಯವಿರುವ ಪ್ರಯೋಜನಗಳು ಮತ್ತು ಪರಿಣಾಮಗಳು, ಯಾವುದಾದರೂ ಇದ್ದಲ್ಲಿ;

iv. ಯಾವುದಾದರೂ ವಿಚಾರಣೆಗಳಿದ್ದಲ್ಲಿ (ಏನಾದರೂ ಪ್ರಶ್ನೆಗಳಿದ್ದಲ್ಲಿ) ಅವುಗಳ ಪರಿಹಾರಕ್ಕಾಗಿ ಸಂಪರ್ಕಿಸಬಹುದಾದ ವ್ಯಕ್ತಿಗಳು;

4.4. ಕೇಳಿಕೊಂಡಲ್ಲಿ, ಕಂಪನಿಯು ಈ ಸಂಹಿತೆಯ ಪ್ರತಿಯೊಂದನ್ನು ಗ್ರಾಹಕರಿಗೆ ಒದಗಿಸುತ್ತದೆ. ಸಂಹಿತೆಯನ್ನು ಕಂಪನಿಯ

ಜಾಲತಾಣದಲ್ಲಿಯೂ ಹಾಗೂ ಅದರ ಪ್ರತೀ ಶಾಖೆಯಲ್ಲಿಯೂ/ಕಛೇರಿಯಲ್ಲಿಯೂ ಕೂಡ ಲಭ್ಯಗೊಳಿಸಲಾಗುತ್ತದೆ.

4.5. ಸಾಲ ನೀಡಿಕೆಯ ವಿಚಾರದಲ್ಲಿ ಕಂಪನಿಯು ಲಿಂಗ, ಜಾತಿ ಮತ್ತು ಧರ್ಮಗಳ ಆಧಾರದ ಮೇಲೆ ತಾರತಮ್ಯವನ್ನು ಮಾಡುವುದಿಲ್ಲ.

4.6. ಗ್ರಾಹಕರಿಗೆ ಸಂಬಂಧಿಸಿದ ಮಾಹಿತಿಯನ್ನು ಕಂಪನಿಯು ಕಡ್ಡಾಯವಾಗಿ ಗೌಪ್ಯತಾ ಮಾಹಿತಿಯೆನ್ನುವ ರೀತಿಯಲ್ಲಿ ನಡೆಸಿಕೊಳ್ಳುತ್ತದೆ ಹಾಗೂ ಕಾಯಿದೆಯಡಿಯಲ್ಲಿ ಅಗತ್ಯವಿರದ ಅಥವಾ ಗ್ರಾಹಕನು ತ್ಯಜಿಸಿರದ ಅಥವಾ ಅನುಮತಿಯನ್ನು ನೀಡಿರದ ಹೊರತು ಯಾವುದೇ ಮಾಹಿತಿಯನ್ನು ಹಂಚಿಕೊಳ್ಳುವುದಿಲ್ಲ.

4.7. ಗ್ರಾಹಕರಿಗೆ ಅವರ ಖಾತೆಯ ಮತ್ತು ಅವರಿಗೆ ಲಭ್ಯವಿರುವ ಸೌಲಭ್ಯಗಳ ಕುರಿತಾದ ಮಾಹಿತಿಗೆ ಸಂಬಂಧಿಸಿದಂತೆ ಅವರಿಗಿರುವ ಹಕ್ಕುಗಳ ಬಗ್ಗೆ ಅವರಿಗೆ ತಿಳಿಸಿಕೊಡುವ ದಿಶೆಯಲ್ಲಿ ಕಂಪನಿಯು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತದೆ.

4.8. ಕಂಪನಿಯು ತನ್ನ ಯಾವುದೇ ಜಾಹೀರಾತು ಹಾಗೂ ಪ್ರಚಾರಕ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಸ್ಪಷ್ಟವಾಗಿರಬೇಕು ಹಾಗೂ ದಾರಿ ತಪ್ಪಿಸುವಂತಿರಬಾರದು.

4.9. ಯಾವುದೇ ವಹಿವಾಟಿನೊಳಗೆ ಪ್ರವೇಶಿಸುವುದಕ್ಕೆ ಮೊದಲು ಕಂಪನಿಯು ತನ್ನ ಗ್ರಾಹಕರಿಗೆ ಬಡ್ಡಿಯ ದರಗಳು, ವಾರ್ಷಿಕೀಕೃತ ಶೇಖಡಾವಾರು ದರ (ಆನ್ಯುವಲೈಸ್ಡ್ ಪರ್ಸಂಟೇಜ್ ರೇಟ್ -ಎಪಿಆರ್), ಶುಲ್ಕಗಳಂತಹ ಎಲ್ಲ ಆರ್ಥಿಕ ಮಾಹಿತಿಯನ್ನು ತಿಳಿಸುತ್ತದೆ.

4.10. ಕಾಲ ಕಾಲಕ್ಕೆ ವಿತರಣಾ ವೇಳಾಪಟ್ಟಿ ಸೇರಿದಂತೆ ಷರತ್ತುಗಳು ಮತ್ತು ನಿಬಂಧನೆಗಳು, ಬಡ್ಡಿಯ ದರಗಳು, ಶುಲ್ಕಗಳೇ ಮೊದಲಾದವುಗಳಲ್ಲಿ ಯಾವುದೇ ಬದಲಾವಣೆಯಾಗಿದ್ದಲ್ಲಿ ಅದರ ಕುರಿತಂತೆ ಮಾಹಿತಿಯನ್ನು ಪತ್ರಗಳ, ಇಮೇಲ್/ಎಸ್‌ಎಮ್‌ಎಸ್ ಸಂವಹನ ಅಥವಾ ಯಾವುದೇ ರೂಪದ ಸಾಮಾನ್ಯ ಅಥವಾ ಸಾರ್ವಜನಿಕ ಪ್ರಕಟಣೆ ಅಥವಾ ಜಾಲತಾಣದಲ್ಲಿನ ಪ್ರದರ್ಶನಗಳ ಮೂಲಕ ತನ್ನ ಗ್ರಾಹಕರಿಗೆ ಪ್ರಾದೇಶಿಕ ಭಾಷೆಯಲ್ಲಿ ಅಥವಾ ಗ್ರಾಹಕರಿಗೆ ತಿಳಿಯುವಂತ ಭಾಷೆಯಲ್ಲಿ ತಿಳಿಸಲು ಪ್ರಯತ್ನಿಸುತ್ತದೆ.

4.11. ಪಾರದರ್ಶಕತೆಯನ್ನು ಖಚಿಪಡಿಸುವ ದಿಶೆಯಲ್ಲಿ, ಸಾಲಗಾರನ ಹಿತಾಸಕ್ತಿಯನ್ನು ಪ್ರಭಾವಿಸುವಂತಹ ಈ ಕೆಳಕಂಡ ಎಲ್ಲ ಮಾಹಿತಿಗಳನ್ನೂ ಒಳಗೊಂಡಂತೆ ಆದರೆ ಅವಷ್ಟಕ್ಕೇ ಸೀಮಿತವಾಗಿರದ ರೀತಿಯಲ್ಲಿ, ಕಂಪನಿಯು ತಾನು ಯೋಗ್ಯವೆಂದು ಪರಿಗಣಿಸುವ ಅಂತಹ ವಿಧಾನದ ಮೂಲಕ ಮತ್ತು ಅಂತಹ ರೀತಿಯಲ್ಲಿ ಅನಾವರಣಗೊಳಿಸುತ್ತದೆ:

i. ಸಾಲದ ಅರ್ಜಿಯನ್ನು ಸಂಸ್ಕರಿಸುವುದಕ್ಕಾಗಿ ಪಾವತಿಸಬೇಕಾಗುವ ಶುಲ್ಕಗಳು;

ii. ಬಡ್ಡಿಯ ವಾಷಿಕೀಕೃತ ದರ & ಅದರ ಅಪ್ಲಿಕೇಷನ್‌ನ ವಿಧಾನ

iii. ವಾಷಿಕೀಕೃತ ಶೇಖಡಾವಾರು ದರ (ಎಪಿಆರ್)

iv. ಸಾಲದ ಮೊತ್ತವನ್ನು ಮಂಜೂರು ಮಾಡದೇ ಇದ್ದಲ್ಲಿ, ಮರುಪಾವತಿಸಬೇಕಾದ (ಹಿಂತಿರುಗಿಸಬೇಕಾದ) ಶುಲ್ಕದ ಯಾವುದೇ ಮೊತ್ತವಿದ್ದಲ್ಲಿ;

v. ಪೂವಪಾವತಿ ಆಯ್ಕೆಗಳು ಮತ್ತು ಶುಲ್ಕಗಳು, ಯಾವುದಾದರೂ ಇದ್ದಲ್ಲಿ;

vi. ವಿಳಂಬಿತ ಮರುಪಾವತಿಗಾಗಿ ಯಾವುದೇ ದಂಡದ ಶುಲ್ಕಗಳಿದ್ದಲ್ಲಿ, ದಪ್ಪಕ್ಷರಗಳಲ್ಲಿ;

vii. ಬಡ್ಡಿಯ ಮರು-ನಿಗದಿಯ ಉಪವಾಕ್ಯದ ಅಸ್ತಿತ್ವ, ಯಾವುದಾದರೂ ಇದ್ದಲ್ಲಿ;

viii. ಸಾಲಗಾರನ ಹಿತಾಸಕ್ತಿಯನ್ನು ಪ್ರಭಾವಿಸಬಲ್ಲ ಯಾವುದೇ ಇನ್ನಿತರ ಸಂಗತಿ.

4.12. ಸಾಲದ ಸಂಸ್ಕರಣೆಯಲ್ಲಿ ಮತ್ತು ಮಂಜೂರಾತಿಯಲ್ಲಿ ಒಳಗೊಳ್ಳಲ್ಪಟ್ಟಿರುವ ಎಲ್ಲ ಬಡ್ಡಿ, ದಂಡಗಳು, ಮತ್ತು ಶುಲ್ಕಗಳ ಬಗ್ಗೆ ಸಾಲಗಾರರು ಅರಿವುಳ್ಳವರಾಗಿದ್ದಾರೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವ ರೀತಿಯಲ್ಲಿ ಪ್ರಕಟಗೊಳಿಸಲಾಗುತ್ತದೆ. ಸಮಾನರ ನಡುವೆ ತಾರತಮ್ಯವೆನಿಸಬಹುದಾದ ಯಾವುದೇ ಕ್ರಿಯೆಯಲ್ಲಿ ಕಂಪನಿಯು ತೊಡಗಿಕೊಳ್ಳಕೂಡದು.

4.13. ಬಡ್ಡಿಯ ದರಗಳಲ್ಲಿನ ಮತ್ತು ಶುಲ್ಕಗಳಲ್ಲಿನ ಬದಲಾವಣೆಗಳು ನಿರೀಕ್ಷಿತ (ಭವಿಷ್ಯದ/ಮುಂದಿನ) ದಿನಾಂಕವೊಂದರಿಂದ ಜಾರಿಗೊಳ್ಳಲ್ಪಡಲಿರುವುದನ್ನು ಕಂಪನಿಯು ಖಚಿತಪಡಿಸುತ್ತದೆ.

4.14. ಕಂಪನಿಯ ನಿರ್ದೇಶಕರುಗಳ ಮಂಡಳಿಯು ಬಡ್ಡಿಯ ದರಗಳನ್ನು ಮತ್ತು ಸಂಸ್ಕರಣೆಯ ಮತ್ತು ಇನ್ನಿತರ ಶುಲ್ಕಗಳನ್ನು ನಿರ್ಧಾರ ಮಾಡುವಲ್ಲಿ ಯೋಗ್ಯವಾದ ಆಂತರಿಕ ತತ್ವಗಳನ್ನು ಮತ್ತು ವಿಧಾನಗಳನ್ನು ಅಳವಡಿಸುತ್ತದೆ.

4.15. ಒಪ್ಪಂದದ ಅಡಿಯಲ್ಲಿ ಪಾವತಿಯನ್ನು ಅಥವಾ ನಿರ್ವಹಣೆಯನ್ನು ನೆನಪಿಸಲು / ತ್ವರಿತಗೊಳಿಸಲು ತೆಗೆದುಕೊಳ್ಳಲಾಗುವ ನಿರ್ಧಾರವು ಸಾಲದ ಒಪ್ಪಂದದೊಂದಿಗೆ ಸಮನ್ವಯದಲ್ಲಿರುತ್ತದೆ.

4.16. ಸಾಲಗಾರನೊಂದಿಗಿನ ಸಂವಹನವು ಸ್ಥಳೀಯ ಭಾಷೆಯಲ್ಲಿ ಅಥವಾ ಸಾಲಗಾರನಿಗೆ ಅರ್ಥವಾಗುವ ಭಾಷೆಯಲ್ಲಿರಬೇಕು. ಸಾಲದ ಅರ್ಜಿಯು ಸಾಲಗಾರನ ಆಸಕ್ತಿಯ ಮೇಲೆ ಪರಿಣಾಮ ಬೀರುವ ಅಗತ್ಯ ಮಾಹಿತಿಯನ್ನು ಒಳಗೊಂಡಿರಬೇಕು ಮತ್ತು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳನ್ನು ಸೂಚಿಸಬೇಕು.

## 5. ಸಾಲಗಳು

5.1. ಕಂಪನಿಯು ತನ್ನ ವ್ಯವಹಾರದ ಸಹಜ ಗತಿಯಲ್ಲಿ, ಸಾಲವೊಂದನ್ನು ಪಡೆದುಕೊಳ್ಳುವುದಕ್ಕಾಗಿ ಅನುಸರಿಸಬೇಕಾಗುವ ಪ್ರಕ್ರಿಯೆಯ ಮತ್ತು ಕಾರ್ಯವಿಧಾನದ ಬಗ್ಗೆ ತನ್ನ ಗ್ರಾಹಕರಿಗೆ ಮಾರ್ಗದರ್ಶನವನ್ನು ಮಾಡಲು ಎಲ್ಲ ಕಾಲಗಳಲ್ಲಿಯೂ ಶಕ್ತಿಮೀರಿ ಪ್ರಯತ್ನಿಸುತ್ತದೆ.

5.2. ಸ್ವತ್ತಿನ ಶೀರ್ಷಿಕೆಯನ್ನು, ವ್ಯಕ್ತಿಯ ಗುರುತನ್ನು ದೃಢೀಕರಿಸುವುದಕ್ಕಾಗಿ ಅಗತ್ಯವಿರುವ ಎಲ್ಲ ಮಾಹಿತಿಗಳನ್ನು, ದಸ್ತಾವೇಜುಗಳನ್ನು ಮತ್ತು/ಅಥವಾ ಜಾಮೀನುಗಳನ್ನೂ ಒಳಗೊಂಡಂತೆ ಒದಗಿಸಬೇಕಾದ ಭದ್ರತೆಯನ್ನೂ ಕೂಲಂಕಷವಾಗಿ ಪರಿಶೀಲಿಸಿದ ಬಳಿಕ, ಅರ್ಹತೆಯ ಆಧಾರದ ಮೇಲೆ ಪ್ರತೀ ಅರ್ಜಿಯನ್ನೂ ಪ್ರತ್ಯೇಕವಾಗಿ ಪರಿಗಣಿಸಲಾಗುತ್ತದೆ.

5.3. ಸಾಲಕ್ಕಾಗಿ ಸಾಲಗಾರನ ಅರ್ಹತೆಯನ್ನು ಖಚಿತಪಡಿಸಿಕೊಳ್ಳುವ ದಿಶೆಯಲ್ಲಿ ಕಂಪನಿಯು ಅರ್ಹತಾ ಪರಿಶೀಲನೆಯನ್ನು ಕೈಗೊಳ್ಳಲಿದ್ದು, ಯಾವುದೇ ಸಾಲ ಅರ್ಜಿಯನ್ನು ಮಂಜೂರು ಮಾಡುವುದಕ್ಕಿಂತ ಅಥವಾ ತಿರಸ್ಕರಿಸುವುದಕ್ಕಿಂತ ಮೊದಲು ಅರ್ಜಿಯ ಕುರಿತಂತೆ ನಿರ್ಧಾರವೊಂದನ್ನು ಕೈಗೊಳ್ಳುವಲ್ಲಿ ಇದು ಒಂದು ಪ್ರಮುಖ ಮಾನದಂಡವಾಗಿರುತ್ತದೆ.

5.4. ಎಲ್ಲ ಸಾಲ ಅರ್ಜಿಗಳ ಸ್ವೀಕೃತಿಗಾಗಿ ಕಂಪನಿಯು ಸ್ವೀಕೃತಿಯೊಂದನ್ನು ನೀಡಬೇಕು. ಸಾಲ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವ ಸಂಭವನೀಯ ಕಾಲಮಿತಿಯ ಬಗ್ಗೆಯೂ ಕೂಡ ಸ್ವೀಕೃತಿಯಲ್ಲಿ ಸೂಚಿಸಿರಬೇಕು.

5.5. ಕಂಪನಿಯು ಗ್ರಾಹಕರಿಗೆ ಸಾಲಮರುಪಾವತಿಯ ಅಂತಿಮ ದಿನಾಂಕಗಳನ್ನು ತಿಳಿಸಬೇಕು, ಮರುಪಾವತಿಯ ಆವರ್ತನವನ್ನು, ಅಸಲು ಮತ್ತು ಬಡ್ಡಿಯ ನಡುವಿನ ವಿಘಟನೆಯನ್ನು, ಎಸ್‌ಎಮ್‌ಎ/ಎನ್‌ಪಿಎ ವರ್ಗೀಕರಣ ದಿನಾಂಕಗಳ ಉದಾಹರಣೆಗಳು ಮೊದಲಾದವುಗಳನ್ನು. ಸಾಲ ಒಪ್ಪಂದ/ಕೆಎಫ್‌ಎಸ್‌ನಲ್ಲಿ ಸ್ಪಷ್ಟವಾಗಿ ನಿರ್ದಿಷ್ಟಪಡಿಸಬೇಕು ಮತ್ತು ಸಾಲದ ಮಂಜೂರಾತಿ ಸಮಯದಲ್ಲಿ ಮತ್ತು ಸಾಲದ ಸಂಪೂರ್ಣ ಮರುಪಾವತಿಯ ತನಕ ಮಂಜೂರಾತಿ ನಿಯಮಗಳಿಗೆ/ಸಾಲ ಒಪ್ಪಂದಕ್ಕೆ ಯಾವುದೇ ಬದಲಾವಣೆಗಳಿದ್ದಲ್ಲಿ, ಸಾಲಗಾರನಿಗೆ ಅದರ ಬಗ್ಗೆ ತಿಳಿಸಬೇಕು.

5.6. ಕಂಪನಿಯು ಆಂಗ್ಲಭಾಷೆಯಲ್ಲಿ ಅಥವಾ ಸಾಲಗಾರನಿಗೆ ಅರ್ಥವಾಗುವ ಯಾವುದೇ ಇತರ ಸ್ಥಳೀಯ ಭಾಷೆಯಲ್ಲಿ ಲಿಖಿತ ರೂಪದಲ್ಲಿ ಮಂಜೂರಾತಿ ಪತ್ರ, ಸಾಲ ಒಪ್ಪಂದದ ಮೂಲಕ ಅಥವಾ ಹಾಗಲ್ಲವಾದಲ್ಲಿ, ವಾರ್ಷಿಕೀಕೃತ ಬಡ್ಡಿಯ ದರ ಮತ್ತು ಅದರ ಅನ್ವಯಿಸುವಿಕೆಯ ಕಾರ್ಯವಿಧಾನಗಳನ್ನೂ ಒಳಗೊಂಡಂತೆ ನಿಯಮಗಳು ಮತ್ತು ಷರತ್ತುಗಳೊಂದಿಗೆ ಮಂಜೂರು ಮಾಡಲಾದ ಸಾಲದ ಮೊತ್ತ, ಎಪಿಆರ್ ಹಾಗೂ ಇನ್ನಿತರ ಶುಲ್ಕಗಳ ಬಗ್ಗೆ ಸಾಲಗಾರನಿಗೆ ತಿಳಿಯಪಡಿಸಬೇಕು ಹಾಗೂ ಸಾಲಗಾರನಿಂದ ಈ ನಿಯಮಗಳ ಮತ್ತು ಷರತ್ತುಗಳ ಸ್ವೀಕೃತಿಯನ್ನು ತನ್ನ ದಾಖಲೆಯಲ್ಲಿ ಇರಿಸಿಕೊಳ್ಳಬೇಕು.

5.7. ಕಂಪನಿಯು ವಾರ್ಷಿಕೀಕೃತ ಆಧಾರದ ಮೇಲೆ ಸಾಲ ಒಪ್ಪಂದದಲ್ಲಿ ಹಾಗೂ ಕೀ ಫ್ಯಾಕ್ಟ್ ಸ್ಟೇಟ್‌ಮೆಂಟ್ (ಕೆಎಫ್‌ಎಸ್) ನಲ್ಲಿ, ಯಾವುದಾದರೂ ವಿಳಂಬಿತ ಮರುಪಾವತಿ ಇದ್ದಲ್ಲಿ ಅದಕ್ಕಾಗಿ ವಿಧಿಸಲಾಗುವ ದಂಡದ ಶುಲ್ಕಗಳ ಬಗ್ಗೆ ದಪ್ಪಕ್ಷರಗಳಲ್ಲಿ ಉಲ್ಲೇಖಿಸಬೇಕು. ಅಂತಹ ದಂಡದ ಶುಲ್ಕಗಳು ಸಾಲದ ಬಾಕಿ ಮೊತ್ತವನ್ನು ಆಧರಿಸಿರಬೇಕು.

5.8. ಸಾಲ ಒಪ್ಪಂದವನ್ನು ಕಾರ್ಯಗತಗೊಳಿಸಿದ ಬಳಿಕ, ಕಂಪನಿಯು ಡಿಜಿಟಲ್ ಸಹಿ ಮಾಡಲ್ಪಟ್ಟಿರುವ ಕೆಎಫ್‌ಎಸ್ (ಆರ್‌ಬಿಐ ನ ಸಲಹೆಯ ಪ್ರಕಾರವಿರುವ ನಮೂನೆಯಲ್ಲಿ ಮಾಹಿತಿಯನ್ನು ಒಳಗೊಂಡಿರುವಂತಹ) ನ ಪ್ರತಿಯನ್ನು, ಸಾಲ ಉತ್ಪನ್ನದ ಸಾರಾಂಶವನ್ನು, ಮಂಜೂರಾತಿಯ ಪತ್ರವನ್ನು, ನಿಯಮಗಳನ್ನು ಮತ್ತು ಷರತ್ತುಗಳನ್ನು, ಖಾತೆಯ ತ:ಖ್ತೆಗಳನ್ನು, ಹಾಗೂ ಕಂಪನಿಯು ತಾನು ತೊಡಗಿಸಿರುವ ಸಾಲ ಸೇವಾ ಪೂರೈಕೆದಾರರ (ಲೋನ್ ಸರ್ವೀಸ್ ಪ್ರೊವೈಡರ್ಸ್ - ಎಲ್‌ಎಸ್‌ಪಿ ಗಳು)/ ಸಾಲ ನೀಡಿಕೆಯ ಡಿಜಿಟಲ್ ಅಪ್ಲಿಕೇಶನ್‌ಗಳ (ಡಿಜಿಟಲ್ ಲೆಂಡಿಂಗ್ ಅಪ್ಲಿಕೇಶನ್ಸ್ - ಡಿಎಲ್‌ಎ ಗಳು) ಖಾಸಗಿ ನೀತಿಗಳನ್ನು ಒದಗಿಸಬೇಕು. ಸಾಲಗಾರನು ಅರ್ಥಮಾಡಿಕೊಂಡಿರುವ ಯಥಾವತ್ತಾದ ರೀತಿಯ ಸಾಲ ಒಪ್ಪಂದವು, ಸಾಲ ಒಪ್ಪಂದದಲ್ಲಿ ಉಲ್ಲೇಖಿತವಾಗಿರುವ ಎಲ್ಲ ದಸ್ತಾವೇಜುಗಳ ತಲಾ ಒಂದೊಂದು ಪ್ರತಿಯೊಂದಿಗೆ ಜೊತೆಗೂಡಿರಬೇಕು.

5.9. ಖಾತರಿದಾರರು ಕಾರ್ಯಗತಗೊಳಿಸಿದ ಖಾತರಿಗಳ ಪತ್ರದ ಪ್ರಕರಣದಲ್ಲಿ, ಖಾತರಿದಾರರ ಬಾಧ್ಯತೆಗಳನ್ನು, ಹೊಣೆಗಾರಿಕೆಗಳನ್ನು, ಮತ್ತು ಪ್ರಧಾನ ಗ್ರಾಹಕನ/ಸಾಲಗಾರನ ಬಾಕಿಗಳನ್ನು ಪಾವತಿಸಲು ಅವರು ಕರೆಯಲ್ಪಡಬಹುದಾದಂತಹ ಪರಿಸ್ಥಿತಿಗಳನ್ನು/ಸಂದರ್ಭಗಳನ್ನು ಪ್ರಸ್ತಾಪಿತ ಪತ್ರವು ಒಳಗೊಂಡಿರುವುದನ್ನು ಕಂಪನಿಯು

ಖಚಿತಪಡಿಸಿಕೊಳ್ಳಬೇಕು.

5.10. ಭದ್ರತೆಯೊಂದಿಗಿನ ಸಾಲಗಳು ಯಾವುದಾದರೂ ಇದ್ದಂತಹ ಪ್ರಕರಣದಲ್ಲಿ, ಸಾಲಗಾರನ ವಿರುದ್ಧ ಕಂಪನಿಯು ಹೊಂದಿರಬಹುದಾದ ಯಾವುದೇ ಕಾನೂನಾತ್ಮಕ ಹಕ್ಕಿಗೆ ಅಥವಾ ಯಾವುದೇ ಇತರ ಕ್ಲೈಮ್‌ಗಾಗಿನ ಧಾರಣಾಧಿಕಾರಕ್ಕೆ ಒಳಪಟ್ಟು ಎಲ್ಲ ಬಾಕಿಗಳ ಮರುಪಾವತಿಯಾದಾಗ ಅಥವಾ ಸಾಲದ ಬಾಕಿ ಮೊತ್ತವು ಸಾಕಾರಗೊಂಡಾಗ (ವಸೂಲಿಯಾದಾಗ) ಕಂಪನಿಯು ಎಲ್ಲ ಭದ್ರತೆಗಳನ್ನೂ ಬಿಡುಗಡೆಗೊಳಿಸಬೇಕು. ಸೆಟ್-ಆಫ್‌ನ ಅಂತಹ ಹಕ್ಕನ್ನು ಕಾರ್ಯಗತಗೊಳಿಸಬೇಕಾಗಿದ್ದಲ್ಲಿ ಆ ಕುರಿತಂತೆ, ಉಳಿದಿರುವ ಕ್ಲೈಮ್‌ಗಳ ಬಗ್ಗೆ ಹಾಗೂ ಸಂಬಂಧಿತ ಕ್ಲೈಮ್ ಇತ್ಯರ್ಥಗೊಳಿಸಲ್ಪಡುವವರೆಗೂ/ಪಾವತಿಸಲ್ಪಡುವವರೆಗೂ ಕಂಪನಿಯು ಭದ್ರತೆಗಳನ್ನು ತನ್ನ ವಶದಲ್ಲಿ ಇರಿಸಿಕೊಳ್ಳಲು ಅಧಿಕಾರವುಳ್ಳದ್ದಾಗುವಂತಹ ಪರಿಸ್ಥಿತಿಗಳ ಬಗ್ಗೆ ಸಂಪೂರ್ಣ ವಿವರಗಳೊಂದಿಗೆ ಸಾಲಗಾರನಿಗೆ ಅಧಿಸೂಚನೆಯನ್ನು ನೀಡಲಾಗುತ್ತದೆ.

5.11. ನಿಧಿಗಳ ವೆಚ್ಚ, ಮಾರ್ಜಿನ್, ಅಪಾಯಕ್ಕೆ ಪ್ರೀಮಿಯಂ ನಂತಹ ಸಂಬಂಧಿತ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಬಡ್ಡಿ ದರದ ಮಾದರಿಯೊಂದನ್ನು ಕಂಪನಿಯು ಅಳವಡಿಸಿಕೊಳ್ಳಬೇಕು ಹಾಗೂ ಸಾಲಗಳಿಗಾಗಿ ಮತ್ತು ಮುಂಗಡಗಳಿಗಾಗಿ ವಿಧಿಸಬೇಕಾದ ಬಡ್ಡಿಯ ದರವನ್ನು ನಿರ್ಧರಿಸಬೇಕು.

5.12. ಬಡ್ಡಿಯ ದರ ಮತ್ತು ಅಪಾಯದ ಹಂತಗಳಿಗಾಗಿನ ಸಾಮಿಪ್ಯ ಮತ್ತು ಸಾಲಗಾರರ ಬೇರೆ ಬೇರೆ ವರ್ಗಗಳಿಗೆ ಬಡ್ಡಿಯ ಬೇರೆ ಬೇರೆ ದರಗಳನ್ನು ವಿಧಿಸುವುದಕ್ಕಾಗಿನ ತಾರ್ಕಿಕತೆಯನ್ನು ಸಾಲಗಾರನಿಗೆ ಅಥವಾ ಗ್ರಾಹಕನಿಗೆ ಅರ್ಜಿ ನಮೂನೆಯಲ್ಲಿ ಬಹಿರಂಗ ಪಡಿಸಬೇಕು ಮತ್ತು ಮಂಜೂರಾತಿಯ ಪತ್ರದಲ್ಲಿ ನಿರ್ದಿಷ್ಟವಾಗಿ ತಿಳಿಯಪಡಿಸಬೇಕು ಹಾಗೂ ಜೊತೆಗೆ ಕಂಪನಿಯ ಜಾಲತಾಣದಲ್ಲಿಯೂ ಲಭ್ಯವಾಗುವಂತೆ ಮಾಡಬೇಕು.

5.13. ದಂಡದ ಶುಲ್ಕಗಳು:

- ಸಾಲಗಾರರಿಂದ ಸಾಲದ ಒಪ್ಪಂದದ ವಿಷಯಿಕ ಷರತ್ತುಗಳು ಮತ್ತು ನಿಬಂಧನೆಗಳನ್ನು ಅನುಸರಿಸದಿದ್ದಕ್ಕಾಗಿ ದಂಡ ಶುಲ್ಕವನ್ನು ವಿಧಿಸಿದರೆ ಅದನ್ನು 'ದಂಡದ ಶುಲ್ಕಗಳು' ಎಂದು ಪರಿಗಣಿಸಬೇಕು ಮತ್ತು 'ದಂಡದ ಬಡ್ಡಿ' ರೂಪದಲ್ಲಿ ವಿಧಿಸಬಾರದು.
- ದಂಡದ ಶುಲ್ಕಗಳನ್ನು ಅಸಲಿಗೆ ಸೇರಿಸಿ ಬಡ್ಡಿ ವಿಧಿಸಬಾರದು.
- ಬಡ್ಡಿಗೆ ಯಾವುದೇ ಹೆಚ್ಚುವರಿ ಅಂಶ ಇರಬಾರದು.
- ವ್ಯವಹಾರವನ್ನು ಹೊರತುಪಡಿಸಿ ಇತರ ಉದ್ದೇಶಗಳಿಗಾಗಿ ಸಾಲ ಪಡೆದ 'ವ್ಯಕ್ತಿಯಾದ ಸಾಲಗಾರರಿಗೆ' ಮಂಜೂರಾದ ಸಾಲಗಳ ಸಂದರ್ಭದಲ್ಲಿ ವಿಷಯಿಕ ಷರತ್ತುಗಳು ಮತ್ತು ನಿಬಂಧನೆಗಳನ್ನು ಅನುಸರಿಸದಿದ್ದಕ್ಕಾಗಿ ವಿಧಿಸಿದ ದಂಡದ ಶುಲ್ಕಗಳು, ಇದೇ ರೀತಿಯ ಅನನುಸರಣೆಗಾಗಿ ವ್ಯಕ್ತಿಯಲ್ಲದ ಸಾಲಗಾರರಿಗೆ ವಿಧಿಸಲಾಗುವ ದಂಡದ ಶುಲ್ಕಗಳಿಗಿಂತ ಹೆಚ್ಚಿರಬಾರದು.
- ವೆಬ್‌ಸೈಟ್‌ನಲ್ಲಿನ ಬಹಿರಂಗಪಡಿಸುವಿಕೆ ಇದ್ದಲ್ಲಿ ಅದರ ಜೊತೆಗೆ, ದಂಡದ ಶುಲ್ಕಗಳ ಪ್ರಮಾಣ ಮತ್ತು ಕಾರಣವನ್ನು ಗ್ರಾಹಕರಿಗೆ ಸಾಲ ಒಪ್ಪಂದ/ಕೆಎಫ್‌ಎಸ್‌ನಲ್ಲಿ ಸ್ಪಷ್ಟವಾಗಿ ಬಹಿರಂಗಪಡಿಸಬೇಕು.
- ಸಾಲದ ವಿಷಯಿಕ ಷರತ್ತುಗಳು ಮತ್ತು ನಿಬಂಧನೆಗಳನ್ನು ಅನನುಸರಣೆಗೆ ಜ್ಞಾಪನೆಗಳನ್ನು, ದಂಡದ ಶುಲ್ಕಗಳು ಮತ್ತು ಕಾರಣವನ್ನು ತಿಳಿಸಬೇಕು.

## 6. ಬಾಕಿಗಳ ಸಂಗ್ರಹಣೆ

6.1. ಕಂಪನಿಯು ಗ್ರಾಹಕರಿಗೆ ಅವರ ಎಲ್ಲ ಬಾಕಿಗಳ ಬಗ್ಗೆ ಎಲ್ಲ ಮಾಹಿತಿಯನ್ನು ಒದಗಿಸಬೇಕು ಹಾಗೂ ಅವುಗಳ ಪಾವತಿಗಾಗಿ ಸಕಾರಣಾತ್ಮಕ ಕಾಲಾವಧಿಯನ್ನು ಒದಗಿಸಬೇಕು.

6.2. ಕಂಪನಿಯು ತನ್ನ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ದಿಶೆಯಲ್ಲಿ, ಸುಸ್ಥಿದಾರ ಗ್ರಾಹಕರಿಂದ ತನ್ನ ಬಾಕಿಗಳನ್ನು ವಸೂಲು ಮಾಡಲು, ತನ್ನ ಬಾಕಿಗಳ ಸಂಗ್ರಹಣೆಯ ಉದ್ದೇಶಕ್ಕಾಗಿ ಮನವೊಲಿಕೆಯ ಕಾರ್ಯವಿಧಾನಗಳನ್ನೂ ಒಳಗೊಂಡಂತೆ ಸಕಾರಣಾತ್ಮಕವಾದ ಮತ್ತು ಕಾನೂನಾತ್ಮಕವಾದ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು.

6.3. ಗ್ರಾಹಕರೊಂದಿಗೆ ಯೋಗ್ಯವಾದ ರೀತಿಯಲ್ಲಿ ವ್ಯವಹರಿಸುವ ದಿಶೆಯಲ್ಲಿ ಸಿಬ್ಬಂದಿ ವರ್ಗವು ಸಾಕಷ್ಟು ತರಬೇತುಗೊಂಡಿರುವುದನ್ನು ಕಂಪನಿಯು ಖಚಿತಪಡಿಸಿಕೊಳ್ಳಬೇಕು.

## 7. ಸಾಮಾನ್ಯ

7.1. ಕಂಪನಿಯು ಸಾಲಗಾರರಿಗೆ ತನ್ನ ಉತ್ಪನ್ನಗಳನ್ನು ಕೊಡಮಾಡುವುದಕ್ಕಾಗಿ ತಾನು ತೊಡಗಿಸಿದ ಮಧ್ಯವರ್ತಿಗಳ (ಏಜೆಂಟ್‌ಗಳ), ಎಲ್ಎಸ್‌ಪಿ ಗಳ ಮತ್ತು ಡಿಎಲ್ಎ ಗಳ ಹೆಸರುಗಳನ್ನು, ತನ್ನ ಜಾಲತಾಣದಲ್ಲಿ ಪ್ರದರ್ಶಿಸಬೇಕು.

7.2. ಸಾಲಗಾರನಿ(ರಿ)ಗೆ ವಿಸ್ತರಿಸಲಾದ ಸಾಲದ ವಸೂಲಾತಿಯನ್ನು ಖಚಿತಪಡಿಸಲು ಕಂಪನಿಯು ತಾನು ನೇಮಕಗೊಳಿಸಿರುವ ಸಂಬಂಧಪಟ್ಟ ವಸೂಲಾತಿ ಏಜೆಂಟ್‌ನ ಹೆಸರನ್ನು ಕೆಎಫ್ಎಸ್ ನಲ್ಲಿ ಕಂಪನಿಯು ಸಾಲಗಾರನಿಗೆ ಅನಾವರಣಗೊಳಿಸಬೇಕು.

7.3. ಸಾಲ ಒಪ್ಪಂದದ ಷರತ್ತುಗಳಲ್ಲಿ ಮತ್ತು ನಿಬಂಧನೆಗಳಲ್ಲಿ ಒದಗಿಸಲಾಗಿರುವ ಉದ್ದೇಶಗಳಿಗಾಗಿ ಹೊರತುಪಡಿಸಿ, ಸಾಲಗಾರನ ವ್ಯವಹಾರಗಳಲ್ಲಿ ಕಂಪನಿಯು ಮಧ್ಯಪ್ರವೇಶಿಸುವುದಿಲ್ಲ (ಸಾಲಗಾರನು ಈ ಹಿಂದೆ ಅನಾವರಣಗೊಳಿಸದ ಮಾಹಿತಿಯು ಇದೀಗ ಗಮನಕ್ಕೆ ಬಂದಿರುವುದನ್ನು ಹೊರತುಪಡಿಸಿ).

7.4. ಸಾಲಗಾರರಿಗೆ ವ್ಯಕ್ತಿಗತವಾಗಿ ಮಂಜೂರು ಮಾಡಲಾದ ತೇಲು ದರದ ಎಲ್ಲ ಅವಧಿ ಸಾಲಗಳ ಮೇಲೂ ಕಂಪನಿಯು ಅವಧಿಪೂರ್ವ ಮುಚ್ಚುಗಡೆ (ಫೋರ್‌ಕ್ಲೋಷರ್) ಶುಲ್ಕಗಳನ್ನು/ ಪೂರ್ವ-ಪಾವತಿ ದಂಡಗಳನ್ನು ವಿಧಿಸುವುದಿಲ್ಲ.

7.5. ಸಾಲ ಖಾತೆಯ ವರ್ಗಾವಣೆಗಾಗಿ ಸಾಲಗಾರನಿಂದ ಮನವಿಯು ಸ್ವೀಕರಿಸಲ್ಪಟ್ಟ ಪ್ರಕರಣದಲ್ಲಿ, ಅದಕ್ಕೆ ಸಮ್ಮತಿ ಅಥವಾ ಇಲ್ಲವಾದಲ್ಲಿ ಅರ್ಥಾತ್ ಕಂಪನಿಯ ಆಕ್ಷೇಪಣೆಯು ಏನಾದರೂ/ಯಾವುದಾದರೂ ಇದ್ದಲ್ಲಿ, ಆ ಕುರಿತು ಮನವಿಯ ಸ್ವೀಕೃತಿಯ 21 ದಿನಗಳೊಳಗಾಗಿ ತಿಳಿಯಪಡಿಸಲಾಗುತ್ತದೆ. ಅಂತಹ ವರ್ಗಾವಣೆಯು ಪಾರದರ್ಶಕ ಕರಾರು-ಸಂಬಂಧೀ ಷರತ್ತುಗಳಿಗನುಗುಣವಾಗಿದ್ದು, ಕಾಯಿದೆಯೊಂದಿಗೆ ಸಮನ್ವಯವನ್ನು ಹೊಂದಿರುತ್ತದೆ.

7.6. ಕಂಪನಿಯು ಅನಗತ್ಯ ಕಿರುಕುಳಕ್ಕೆ ಇಳಿಯುವುದಿಲ್ಲ, ಅಂದರೆ ಮಾಮೂಲಿಯಲ್ಲದ ಸಮಯದಲ್ಲಿ ಸಾಲಗಾರರಿಗೆ ನಿರಂತರವಾಗಿ ತೊಂದರೆ ನೀಡುವುದು, ಸಾಲಗಳ ವಸೂಲಾತಿಗಾಗಿ ತೋಳ್ಬಲವನ್ನು ಬಳಸುವುದು ಇತ್ಯಾದಿ ಮಾಡಬಾರದು. ಗ್ರಾಹಕರೊಂದಿಗೆ ಸೂಕ್ತ ರೀತಿಯಲ್ಲಿ ವ್ಯವಹರಿಸಲು ಸಿಬ್ಬಂದಿಗೆ ಸಮರ್ಪಕವಾಗಿ ತರಬೇತಿ ನೀಡಲಾಗಿದೆ ಎಂದು ಕಂಪನಿಯು ಖಚಿತಪಡಿಸಿಕೊಳ್ಳುತ್ತದೆ.

7.7. ಕಂಪನಿಯು ಜವಾಬ್ದಾರಿಯುತ ಸಾಲ ವ್ಯವಹಾರದ ನಡವಳಿಕೆಗೆ ಸಂಬಂಧಿಸಿದ ಮಾರ್ಗಸೂಚಿಗಳಿಗೆ ಬದ್ಧವಾಗಿರುತ್ತದೆ - ಕಂಪನಿಯು ಸುರಕ್ಷಿತ ಸಾಲ ಉತ್ಪನ್ನಗಳಲ್ಲಿ ವ್ಯವಹರಿಸಲು ಪ್ರಾರಂಭಿಸಿದಾಗ, ವೈಯಕ್ತಿಕ ಸಾಲಗಳ ಮರುಪಾವತಿ/ಸೆಟಲ್‌ಮೆಂಟ್ ಆದ ತರುವಾತ ಚರ/ಸ್ಥಿರ ಆಸ್ತಿ ದಾಖಲೆಯ ಬಿಡುಗಡೆ ಹೀಗೆ.

7.8. ಕಂಪನಿಯು ಫ್ಲೋಟಿಂಗ್ ದರದ ಸಾಲಗಳನ್ನು ಒದಗಿಸಲು ಪ್ರಾರಂಭಿಸಿದ ನಂತರ EMI ಗಳ ಮೇಲಿನ ಫ್ಲೋಟಿಂಗ್ ಬಡ್ಡಿ ದರವನ್ನು ಮರುಹೊಂದಿಸಲು ಸಂಬಂಧಿಸಿದ ಮಾರ್ಗಸೂಚಿಗಳನ್ನು ಕಂಪನಿಯು ಅನುಸರಿಸುತ್ತದೆ. ಪ್ರಸ್ತುತ ಕಂಪನಿಯು ನಿಗದಿತ ದರದಲ್ಲಿ ಮಾತ್ರ ಸಾಲ ನೀಡುತ್ತಿದೆ.

7.9. ಕಂಪನಿಯು ಸೆಪ್ಟೆಂಬರ್ 2, 2022 ದಿನಾಂಕದ ಡಿಜಿಟಲ್ ಸಾಲದ ಮಾರ್ಗಸೂಚಿಗಳನ್ನು ಮತ್ತು ಅದರ ಯಾವುದೇ ತಿದ್ದುಪಡಿಯನ್ನು ಅನುಸರಿಸುತ್ತದೆ.

## 8. ಕಂಪನಿಯಿಂದ ಆರ್ಥಿಕ ನೆರವು ನೀಡಲ್ಪಟ್ಟ ಉತ್ಪನ್ನಗಳ ಮರುಸ್ವಾಧೀನ

8.1. ಕಂಪನಿಯು ಸಾಲಗಾರನೊಂದಿಗಿನ ಕರಾರು/ಸಾಲ ಒಪ್ಪಂದದಲ್ಲಿ ಮರು-ಸ್ವಾಧೀನಕ್ಕೆ ಸಂಬಂಧಿಸಿದ ಅಂತರ್-ನಿರ್ಮಿತ ಉಪವಾಕ್ಯವೊಂದನ್ನು ಹೊಂದಿದ್ದು, ಇದನ್ನು ಕಾನೂನಾತ್ಮಕವಾಗಿ ಜಾರಿಗೊಳಿಸಬಹುದಾಗಿರುತ್ತದೆ.

8.2. ಕರಾರು/ಸಾಲ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳು ಇವುಗಳಿಗೆ ಸಂಬಂಧಿಸಿದ ನಿಬಂಧನೆಗಳನ್ನೂ ಒಳಗೊಂಡಿರುತ್ತವೆ: (i) ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕಿಂತ ಮೊದಲು ಸೂಚನೆಯ ಅವಧಿ (ನೋಟೀಸ್ ಪಿರಿಯೆಡ್); (ii) ಸೂಚನಾ ಅವಧಿಯನ್ನು ಕೈಬಿಡಬಹುದಾದ ಪರಿಸ್ಥಿತಿಗಳು; (iii) ಭದ್ರತೆಯನ್ನು ವಶಕ್ಕೆ ತೆಗೆದುಕೊಳ್ಳುವುದಕ್ಕಾಗಿನ ಕಾರ್ಯವಿಧಾನ; (iv) ಸ್ವತ್ತಿನ ಮಾರಾಟ / ಹರಾಜಿಗಿಂತ ಮೊದಲು ಸಾಲದ ಮರುಪಾವತಿಗಾಗಿ ಸಾಲಗಾರನಿಗೆ ಕೊಡಬೇಕಾಗಿರುವ ಅಂತಿಮ ಅವಕಾಶಕ್ಕೆ ಸಂಬಂಧಿಸಿದ ಒಂದು ನಿಬಂಧನೆ; (v) ಸಾಲಗಾರನಿಗೆ ಮರುಸ್ವಾಧೀನವನ್ನು ಕೊಡುವುದಕ್ಕಾಗಿನ ಕಾರ್ಯವಿಧಾನ, ಹಾಗೂ (vi) ಸ್ವತ್ತಿನ ಮಾರಾಟಕ್ಕಾಗಿನ / ಹರಾಜಿಗಾಗಿನ ಕಾರ್ಯವಿಧಾನ.

8.3. ಸಾಲ ಒಪ್ಪಂದದ ಒಂದು ಪ್ರತಿಯ ಜೊತೆಗೆ ಸಾಲ ಒಪ್ಪಂದದಲ್ಲಿ ಹೆಸರಿಸಲಾಗಿರುವ ಎಲ್ಲ ದಸ್ತಾವೇಜುಗಳ ಒಂದೊಂದು ಪ್ರತಿಯನ್ನು ಸಾಲಗಾರನಿಗೆ ಒದಗಿಸುವುದರ ಮೂಲಕ, ಅಂತಹ ನಿಯಮಗಳು ಮತ್ತು ಷರತ್ತುಗಳ ಪ್ರತಿಯೊಂದನ್ನು ಸಾಲಗಾರನಿಗೆ ಲಭ್ಯವಾಗುವಂತೆ ಮಾಡಲೇಬೇಕು.

## 9. ದೂರುಗಳು ಮತ್ತು ಕುಂದುಕೊರತೆಗಳು

9.1. ಕಂಪನಿಯ ನಿರ್ದೇಶಕರುಗಳ ಮಂಡಳಿಯು ಸಂಸ್ಥೆಯೊಳಗಡೆಯೇ ಕುಂದುಕೊರತೆಗಳ ಪರಿಹಾರದ ಕಾರ್ಯವಿಧಾನವೊಂದನ್ನು ಅಳವಡಿಸಿದ್ದು, ಇದು https://whizdmfinance.com/grievance-redressal/ ನಲ್ಲಿ ಲಭ್ಯವಿದೆ.

9.2. ಎಲ್ಲ ದೂರುಗಳನ್ನು ಮತ್ತು ಕುಂದುಕೊರತೆಗಳನ್ನು ಒಂದು ಸಕಾರಣಾತ್ಮಕ ಸಮಯದೊಳಗೆ ಪರಿಹರಿಸಲು/ಅವುಗಳಿಗೆ ಉತ್ತರಿಸಲು ಕಂಪನಿಯು ಶಕ್ತಿಮೀರಿ ಪ್ರಯತ್ನಿಸುತ್ತದೆ ಹಾಗೂ ಗ್ರಾಹಕರಿಗೆ ಅವರ ದೂರುಗಳ ಸ್ಥಿತಿಗತಿಗಳ ಕುರಿತಂತೆ ಮಾಹಿತಿಯನ್ನು ತಿಳಿಯಪಡಿಸುತ್ತದೆ.

9.3. ಗ್ರಾಹಕರ ಯಾವುದಾದರೂ ದೂರುಗಳು ಅಥವಾ ಕುಂದುಕೊರತೆಗಳಿದ್ದಲ್ಲಿ ಅವುಗಳನ್ನು ದಾಖಲಿಸುವಂತಾಗುವ ಮತ್ತು/ಅಥವಾ ಅವುಗಳನ್ನು ಸಲ್ಲಿಸುವಂತಾಗುವ ದಿಶೆಯಲ್ಲಿನ ಸೌಲಭ್ಯಗಳನ್ನು, ಕಂಪನಿಯು ಇರಬಹುದಾದ ತನ್ನ ಪ್ರತಿಯೊಂದು ಶಾಖೆಯಲ್ಲಿಯೂ ಮತ್ತು ಕಛೇರಿಗಳಲ್ಲಿಯೂ ಲಭ್ಯವಾಗುವಂತೆ ಮಾಡುತ್ತದೆ.

9.4. ಕುಂದುಕೊರತೆಗಳಿಗೆ ಸಂಬಂಧಿಸಿದ ತನ್ನ ಪರಿಹಾರಾತ್ಮಕ ಕ್ರಮವನ್ನು, ತನ್ನ ಜಾಲತಾಣದಲ್ಲಿ ಲಭ್ಯವಾಗಿಸಿರುವುದನ್ನು ಕಂಪನಿಯು ಖಚಿತಪಡಿಸುತ್ತದೆ.

9.5. ಸಾಲ ಸೌಲಭ್ಯಗಳನ್ನೂ ಒಳಗೊಂಡಂತೆ ಉತ್ಪನ್ನಗಳನ್ನು ಮತ್ತು ಸೌಲಭ್ಯಗಳನ್ನು ದೈಹಿಕ/ದೃಷ್ಟಿಗೆ ಸಂಬಂಧಿಸಿದ ಸವಾಲುಗಳನ್ನು ಎದುರಿಸುತ್ತಿರುವ ಅರ್ಜಿದಾರರಿಗೆ ವಿಸ್ತರಿಸುವಲ್ಲಿ, ಕಂಪನಿಯು ಅವರ ಅಂಗವೈಕಲ್ಯತೆಯನ್ನು ಆಧಾರವಾಗಿಟ್ಟುಕೊಂಡು ತಾರತಮ್ಯವನ್ನು ಮಾಡುವುದಿಲ್ಲ. ಇಷ್ಟೇ ಅಲ್ಲದೇ, ಅಂಗವೈಕಲ್ಯದೊಂದಿಗಿನ ವ್ಯಕ್ತಿಗಳ ಕುಂದುಕೊರತೆಗಳ ಪರಿಹರಿಸುವಿಕೆಯನ್ನು, ಕಂಪನಿಯು ಇಲ್ಲಿ ಒದಗಿಸಲಾಗಿರುವ; ಅಸ್ತಿತ್ವದಲ್ಲಿರುವ ಕುಂದುಕೊರತೆಗಳ ಪರಿಹಾರಾತ್ಮಕ ಕ್ರಿಯಾತಂತ್ರದ ಅಡಿಯಲ್ಲಿ ಖಚಿತಪಡಿಸುತ್ತದೆ.

## 10. ಸಂಹಿತೆಯ ಪುನರಾವಲೋಕನ

ನಿರ್ದೇಶಕರುಗಳ ಮಂಡಳಿಯು ನ್ಯಾಯೋಚಿತ ಪದ್ಧತಿಗಳ ಸಂಹಿತೆಯ ಅನುಸರಣೆಯ ಹಾಗೂ ಆಡಳಿತದ ವಿವಿಧ ಮಟ್ಟಗಳಲ್ಲಿ ಕುಂದುಕೊರತೆಗಳ ಪರಿಹಾರಕ್ಕೆ ಸಂಬಂಧಿಸಿದ ಕಾರ್ಯವಿಧಾನದ ಕಾರ್ಯಾಚರಣೆಯ ನಿಯತಕಾಲಿಕ ಪುನರಾವಲೋಕನವನ್ನು ಕೈಗೊಳ್ಳುತ್ತದೆ. ಈ ಸಂಹಿತೆಯ ಅನುಸರಣೆಯ ಕುರಿತಂತೆ ಸಿಸಿಒ ನಿಯತಕಾಲಿಕ ಪುನರಾವಲೋಕನವನ್ನು ಕೈಗೊಳ್ಳುತ್ತದೆ ಹಾಗೂ ಒಂದು ಅಂತಹ ಪುನರಾವಲೋಕನದ ಒಂದು ಕ್ರೋಢೀಕೃತ ವರದಿಯನ್ನು ಅದು ಮಂಡಳಿಗೆ ಸಲ್ಲಿಸಬಹುದಾಗಿದೆ.